ಅವಳ ಇಂತಹ ಚಿಂತನೆಗಳು ನನಗೆ ತುಂಬಾ ಇಷ್ಟವಾಗುತ್ತವೆ. ಅಮ್ಮನೇ ಕೆಲವು ಹರಕೆ ಹೊತ್ತಿದ್ದಾಳೆ. ಕೆಲವು ಸಲ ನನ್ನಿಂದಲೂ ಮಾಡಿಸುತ್ತಿರುತ್ತಾಳೆ. ಅವಳಿಗಾಗಿ ನಾನು ಮಾಡುತ್ತಿರುತ್ತೇನೆ.

ಒಂದು ಸಲ ಸುಬ್ರಹ್ಮಣ್ಯ ಸ್ವಾಮಿಗೆ ಐದುವಾರ ಎಳ್ಳಿನ ದೀಪ ಹಚ್ಚು ಎಂದು ಹೇಳಿದ್ದಳು. ನಾನು ಕಷ್ಟಪಟ್ಟು ಬೆಂಗಳೂರಿನಲ್ಲಿ ನನ್ನ ದಿನದ ಅವಾಂತರಗಳಲ್ಲಿ ಅದನ್ನೂ ಮಾಡಿ ಪೂರೈಸಿದ್ದೆ. ಅಷ್ಟು ದಿನವೂ ಶ್ರದ್ಧಾ ಏನೂ ಮಾತನಾಡಿರಲಿಲ್ಲ. ಕೊನೆಯ ದಿನ ಮುಗಿಸಿ ಬಂದು ಉಸ್ಸಪ್ಪಾ ಎಂದು ಕುಳಿತು ಕಾಫಿ ಕುಡಿಯುತ್ತಾ ಹೇಳಿದೆ, 'ಸದ್ಯ ಇವತ್ತು ಮುಗೀತು ಐದುವಾರ.'

ಶ್ರದ್ಧಾ ಕಣ್ಣು ಕಿರಿದು ಗೊಳಿಸಿ ನನ್ನನ್ನು ನೋಡಿದ್ದಳು.

'ದಿನದ ಅವಾಂತರದಲ್ಲಿ ಇದನ್ನೆಲ್ಲ ಮಾಡುವುದು ಎಷ್ಟು ಕಷ್ಟ ಗೊತ್ತಾ?' ಸಮಜಾಯಿಷಿ ನೀಡಿದ್ದೆ.

'ಮಾಡಿದರೆ ಶ್ರದ್ಧೆಯಿಂದ ಮಾಡಬೇಕು ಅಷ್ಟೆ. ಈ ಉದ್ಗಾರ ಎಲ್ಲ ಯಾಕೆ?' ಕಾಫಿ ಹೀರುತ್ತಾ ಕೇಳಿದ್ದಳು.

'ಶ್ರದ್ಧೆಯಿಂದನೇ ಮಾಡಿರುತ್ತೀವಿ. ಆದರೆ... ಸುಸ್ತಾಗಿರತ್ತಲ್ಲ...' ನನ್ನ ವಾದ.

'ಶ್ರದ್ಧೆಯಿಂದ ಮಾಡಿದ ಮೇಲೆ ಆನಂದ ಉಳಿಯಬೇಕು. ಸದ್ಯ ಮುಗೀತಲ್ಲ ಅಂತಲ್ಲ...'

'ನೋಡು... ನನಗೆ ಶ್ರದ್ಧೆ, ಪದ್ದೆ ಎಲ್ಲ ಗೊತ್ತಿಲ್ಲ. ಅಮ್ಮಂಗೆ ಬೇಜಾರಾಗತ್ತೆ ಅಂತ ಮಾಡ್ತೀನಿ ಅಷ್ಟೆ. ಇದರಲ್ಲೆಲ್ಲ ನನಗೆ ನಂಬಿಕೆ ಇದೆ ಅಂತ ಅಲ್ಲ' ನನ್ನ ವಾದ ತೆರೆದಿಟ್ಟೆ.

'ಯಾರಿಗೆ ಅಂತ ಮಾಡಿದಿರಿ ಅನ್ನೋದು ಮುಖ್ಯ ಅಲ್ಲ. ಹೇಗೆ ಮಾಡುತ್ತೀರಿ ಅಂತ ಮುಖ್ಯ...' ಅವಳು ಸ್ವಲ್ಪ ಬಿಗಿಯಾಗೇ ಹೇಳಿದಳು. 'ನಿಮಗೆ ಇಷ್ಟ ಅಂತ ಅಮ್ಮ ಹಾಲುಬಾಯಿ ಮಾಡಿರುತ್ತಾರೆ. ಅವರಿಗೆ ಆರೋಗ್ಯ ಸರಿ ಇಲ್ಲದಿದ್ದರೂ ಮಾಡಿರುತ್ತಾರೆ. ಸದ್ಯ ಮುಗೀತಲ್ಲ ಅಂತ ಅನ್ನಲ್ಲ. ಮಗ ತಿಂದು ಸಂತೋಷಿಸಿದನಾ ಅಂತ ನೋಡುತ್ತಾರೆ ಅಲ್ವ?... ಹಾಗೆನೇ... ನೀವು ಯಾರಿಗೆ ಮಾಡಿದಿರಿ ಅಂತ ಮುಖ್ಯ ಅಲ್ಲ... ಅದರಲ್ಲಿ ನೀವೂ ಸಂತೋಷ ಪಡೆಯಬೇಕು. ಇಲ್ಲವಾದರೆ ಮಾಡಿದ್ದಕ್ಕೆ ಏನು ಸಾರ್ಥಕ?'

ಅವಳ ಮಾತು ನಿಜ ಎನಿಸಿತು. ಅವಳು ಇದ್ದದ್ದೂ ಹಾಗೆಯೇ. ಅವಳಿಗೆ ಕೆಲವು ನಿಲುವುಗಳು ಬಹಳ ಸ್ಪಷ್ಟ ತಳಹದಿಯಲ್ಲಿ ಇರುತ್ತಿದ್ದವು. ಅವಳು ಹಾಗೆಯೇ ನಡೆಯುತ್ತಿದ್ದಳು. ಒಂದು ರೀತಿಯಲ್ಲಿ ನನಗೆ ಬದುಕು ವ್ಯವಸ್ಥಿತವಾಗಿ ಸಾಗುತ್ತಿರುವ ನೌಕೆಯಂತೆ. ಅದರ ಮುಖ್ಯ ರೂವಾರಿ ಅವಳೆ.

ಆದರೆ... ಪ್ರಶ್ನಾಗೆ ಏನಾಗಿದೆ? ಅವಳು ನನಗೆ ಸಮಸ್ಯೆಯೇ ಆಗಿಬಿಟ್ಟಳು. ವರುಷಕ್ಕೆ ಒಂದು ಸಲ ಕಡಲ ತೀರದ ನಮ್ಮೂರಿಗೆ ಹದಿನೈದು ದಿನ ಬಂದು ಹೋಗುತ್ತಿದ್ದೆ. ಬೆಂಗಳೂರಿನಲ್ಲಿ ವರುಷ ಪೂರ್ತಿ ಕಳೆದ ನೆಮ್ಮದಿಯನ್ನು ಹದಿನೈದು ದಿನದಲ್ಲಿ ಬೊಗಸೆಯಲ್ಲಿ ತುಂಬಿಕೊಳ್ಳುವ ಹಂಬಲ. ಮತ್ತೂ ಬೇಕೆಂದರೆ ಅಮ್ಮ ಅಪ್ಪ ತಾವೇ ಒಂದು ವಾರದ ಮಟ್ಟಿಗೆ ಬಂದು ಹೋಗುತ್ತಿದ್ದರು. ಆದರೆ ಪ್ರಶ್ನಾ ಕುರಿತು ಯಾರಿಗೂ ಚಿಂತೆಯೇ ಇಲ್ಲ ಅನ್ನಿಸಿತು. ಅವಳು ಕಳೆದುಹೋಗುತ್ತಿದ್ದಾಳೆ... ಹೀಗೇ ಮುಂದುವರಿದರೆ... ಈ ಬದಲಾವಣೆ ಖಂಡಿತಾ ಒಳ್ಳೆಯದಕ್ಕಲ್ಲ...

ಮರುದಿನ ಬೆಳಿಗ್ಗೆ ಏಳುತ್ತಿದ್ದಂತೆಯೇ ತಿಂಡಿ ಮುಗಿಸಿ ಪ್ರಶ್ನಾಳ ಮನೆಗೆ ಹೋದೆ. ಅವಳ ಅತ್ತೆ,